**ಸಿ.ಸಿ ನಂ.614/2020**

ಪಿ.ಡಬ್ಲ್ಯೂ: 04
ಸಿ.ಡಬ್ಲ್ಯೂ: 04

ದಿನಾಂಕ 13.12.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿಯು ದಿಃ 16.10.2017 ರ ಅಮಾನತು ಪಂಚನಾಮೆಯ ದೃಢೀಕೃತ ಪ್ರತಿಯನ್ನು ನೋಡಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ್ದರಿಂದ ಸದರಿ ಅಮಾನತು ಪಂಚನಾಮೆಯನ್ನು ನಿಪಿಃ 8 ಅಂತ ಗುರುತಿಸಲಾಯಿತು. ನಿಪಿಃ 8 ಅಮಾನತು ಮಹಜರಿಗೆ ನಾನು ಚಿತ್ರದುರ್ಗದ ಕೋಟೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಯಾವ ಕಾರಣಕ್ಕಾಗಿ ನನ್ನ ಸಹಿ ಪಡೆದಿರುತ್ತಾರೆ ಅಂತ ನನಗೆ ಗೊತ್ತಿಲ್ಲ.

ನನ್ನನ್ನು ಪೊಲೀಸರು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಪೊಲೀಸರು ಅಮಾನತುಪಡಿಸಿಕೊಂಡಿರುವುದಿಲ್ಲ. ನನಗೆ ಯಾವುದೇ ವ್ಯಕ್ತಿಗಳನ್ನು ತೋರಿಸಿರುವುದಿಲ್ಲ.

**(ಈ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾನೆ. ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಅನುಮತಿಸಿದೆ)**

**ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 16.10.2017 ರಂದು ಚಳ್ಳಕೆರೆ ಪಟ್ಟಣದ ತ್ಯಾಗರಾಜ ನಗರದಲ್ಲಿರುವ ಐಶ್ವರ್ಯ ಡಾಬಾ ಬಳಿ ಇರುವ ಅಬೀಬ್ ಉಲ್ಲಾರವರ ವಾಸದ ಮನೆಯ ಹತ್ತಿರ ಪೊಲೀಸರು ನನ್ನನ್ನು ಕರೆಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ನ್ಯಾಯಾಲಯದ ಮುಂದಿರುವ 1 ನೇ

ಆರೋಪಿಯು ತಾನು ಇದೇ ಮನೆಯಲ್ಲಿ ಕಳ್ಳತನ ಮಾಡಿರುವುದಾಗಿ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ಮತ್ತು ಚಾಸಾ.5 ರವರನ್ನು ಹಾಗೂ 1 ನೇ ಆರೋಪಿಯನ್ನು ನಮ್ಮೊಂದಿಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆಗ 1 ನೇ ಆರೋಪಿಯು ಸದರಿ ಜೀಪನ್ನು ಒಂದು ಮನೆಯ ಹತ್ತಿರ ನಿಲ್ಲಿಸಿ ತಾನು ಹಾಗೂ ತನ್ನೊಂದಿಗೆ ತನ್ನ ಸ್ನೇಹಿತರನ್ನು ಕಳ್ಳತನ ಮಾಡಿದ ಮನೆ ಇದೇ ಆಗಿರುತ್ತದೆ ಅಂತ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆ ಚಾಸಾ.1 ರವರಾದ ಅಬೀಬುಲ್ಲಾ ರವರ ಮನೆಯಾಗಿರುತ್ತದೆ ಎಂದರೆ ಸರಿಯಲ್ಲ.

ನಾವು ಅವರ ಜೊತೆ ಮನೆಯ ಒಳಗಡೆ ಹೋದಾಗ ಕಳ್ಳತನ ಮಾಡಿದ ಗಾಡ್ರೇಜ್ ಬೀರನ್ನು ಹೊಡೆದು ಕಳ್ಳತನ ಮಾಡಿದ ಜಾಗ ಇದೇ ಅಂತ ತೋರಿಸಿದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಬೆಳಗ್ಗೆ 11.10 ರಿಂದ 11.50 ರ ವರೆಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಂತರ ಅದೇ ದಿನ ಚಿತ್ರದುರ್ಗದ ನಗರ ವೃತ್ತ ಕಚೇರಿಗೆ ಬರಮಾಡಿಕೊಂಡರು ಎಂದರೆ ಸರಿಯಲ್ಲ. ಅಲ್ಲಿದ್ದ 1 ನೇ ಆರೋಪಿಯನ್ನು ತೋರಿಸಿ ಆ ವ್ಯಕ್ತಿಯ ಜೊತೆ ಹೋದರೆ ಕಳ್ಳತನ ಮಾಡಿದ ವಸ್ತುಗಳನ್ನು ತೋರಿಸುವುದಾಗಿ ಹೇಳಿದ ಮೇರೆಗೆ ಸದರಿ ವ್ಯಕ್ತಿಯ ಜೊತೆ ನಾನು ಮತ್ತು ಚಾಸಾ.5 ಮತ್ತು 6 ರವರ ಜೊತೆ ಪೊಲೀಸ್ ಜೀಪಿನಲ್ಲಿ 1 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ತನ್ನ ಮನೆಯ ಹತ್ತಿರ ವಾಹನವನ್ನು ನಿಲ್ಲಿಸಿ, ನಾನು 2 ಮತ್ತು 3 ನೇ ಆರೋಪಿರವರ ಜೊತೆ ಸೇರಿ ಕಳ್ಳತನ ಮಾಡಿದ ಬಂಗಾರದ ಆಭರಣಗಳನ್ನು ಇದೇ ಮನೆಯ ಗಾಡ್ರೇಜ್ ಬೀರುವಿನಲ್ಲಿ ಇಟ್ಟಿರುತ್ತೇನೆ ಅಂತ ಹೇಳಿದನು ಎಂದರೆ ಸರಿಯಲ್ಲ. ಸದರಿ ಮನೆಯು ಚೇಳುಗುಡ್ಡದ ಮದೀನ ಮುನಾವರ್ ಮಸೀದಿ ಬಳಿ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ತನ್ನ ಮನೆಯ ಒಳಗಡೆ ಹೋಗಿ ಅಲ್ಲಿದ್ದ ಗಾಡ್ರೇಜ್ ಬೀರುವನ್ನು ತೆಗೆದು ಅದರಲ್ಲಿದ್ದ ಬಂಗಾರದ ಆಭರಣಗಳನ್ನು ತೋರಿಸಿ ನಾನು ಮತ್ತು ಆರೋಪಿ 2 ಮತ್ತು 3 ರವರು ಸೇರಿ ಕಳ್ಳತನ ಮಾಡಿದ ವಸ್ತುಗಳು ಇವೆ ಅಂತ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಭರಣಗಳು ಪಿ.ಎಫ್. ನಂ. 24/2017 ರಲ್ಲಿನ ಐಟಂ ನಂ.1 ರಿಂದ 15 ರವರೆಗಿನ ಮುದ್ದೆ ಮಾಲುಗಳಾಗಿದ್ದು ಸದರಿ ಮುದ್ದೆಮಾಲುಗಳನ್ನು ನಮ್ಮ

ಸಮಕ್ಷಮ ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಮಾನತು ಪಂಚನಾಮೆಯನ್ನು ಬೆಳಗ್ಗೆ .00 ರಿಂದ 10.00 ಗಂಟೆ ವರೆಗೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

ಸಾಕ್ಷಿಗೆ ನಿಪಿಃ 6 ರಲ್ಲಿನ ಭಾವಚಿತ್ರದಲ್ಲಿರುವ ವಸ್ತುಗಳೇ ಆ ದಿನ ಅಮಾನತು ಪಡಿಸಿಕೊಂಡ ವಸ್ತುಗಳಾಗಿರುತ್ತವೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಪಿಃ 7 ರಂತೆ ಸ್ಥಳ ಪಂಚನಾಮೆಯನ್ನು ಮಾಡಿ ನಿಪಿಃ 8 ರಂತೆ ಅಮಾನತು ಪಂಚನಾಮೆಯನ್ನು ಮಾಡುವಾಗ ನಾನು ಹಾಜರಿದ್ದು ನನ್ನ ಸಮಕ್ಷಮದಲ್ಲಿ ಮುದ್ದೆಮಾಲು 1 ರಿಂದ 15 ಒಡವೆಗಳನ್ನು ಅಮಾನತುಪಡಿಸಿಕೊಂಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.